6

ಆರಾಧ್ಯನನ್ನು ಅರಿಯಿರಿ
ಪ್ರವಾದಿ(ಸ)ರನ್ನು ಅನುಸರಿಸಿರಿ



مدرسة الصفة الإسلامية

MADRASATU SUFFAH AL ISLAMIYYA

SKYWAY COMPLEX, 6TH BLOCK, KRISHNAPURA,
SURATKAL, MANGALORE - 575 014
PH: 0824-2271449 MOB: 8722695551

ಮನುಷ್ಯನು ಅಲ್ಲಾಹನ ವಿಶಿಷ್ಟ ಸೃಷ್ಟಿಯಾಗಿದ್ದಾನೆ. ತನ್ನನ್ನು ಸೃಷ್ಟಿಸಿದ ಸೃಷ್ಟಿಕರ್ತನನ್ನು ಅರಿಯುವುದು, ಮನುಷ್ಯರಿಗೆ ಅವನ ನಿಯಮ–ನಿರ್ದೇಶನಗಳನ್ನು ಕಲಿಸಲು ಕಳುಹಿಸಲಾದ ಕೊನೆಯ ಪ್ರವಾದಿ ಮುಹಮ್ಮದ್(ﷺ) ಅವರನ್ನು ಅನುಸರಿಸುವುದು ಎಲ್ಲಾ ಮನುಷ್ಯರಿಗೂ ಕಡ್ಡಾಯವಾಗಿದೆ. ಮನುಷ್ಯರ ಆರಾಧ್ಯನಾದ ಅಲ್ಲಾಹು ಮತ್ತು ಅವನ ಪ್ರವಾದಿ ಮುಹಮ್ಮದ್ (ﷺ) ರವರ ಕುರಿತು ಒಂದು ಕಿರು ಮಾಹಿತಿಯಾಗಿದೆ ಈ ಲೇಖನ.

ಅಲ್ಲಾಹು ಯಾರು?

ಕುರ್‌ಆನ್ ಹೇಳುತ್ತದೆ, “(ಓ ಪ್ರವಾದಿಯವರೇ) ಹೇಳಿರಿ, ಅಲ್ಲಾಹು, ಅವನು ಏಕೈಕನು. ಅಲ್ಲಾಹು (ಸರ್ವರಿಗೂ) ಆಶ್ರಯದಾತನಾದ ನಿರಪೇಕ್ಷನು. ಅವನು (ಯಾರಿಗೂ) ಜನ್ಮ ನೀಡಿಲ್ಲ. ಅವನು (ಯಾರ ಸಂತತಿಯಾಗಿ) ಜನಿಸಿದ-

ವನೂ ಅಲ್ಲ. ಅವನಿಗೆ ಸರಿಸಾಟಿಯಾಗಿ ಯಾರೂ ಇಲ್ಲ." (ಕುರ್‌ಆನ್ 112:1–4)

"ಅಲ್ಲಾಹು. ಅವನ ಹೊರತು ಅನ್ಯ ದೇವನಿಲ್ಲ. ಅವನು ಚಿರಂಜೀವಿ, ಸ್ವಯಂಸ್ಥಿರನು, ಸರ್ವನಿಯಂತ್ರಕ (ಜಗನ್ನಿಯಾಮಕ). ತೂಕಡಿಕೆಯೋ, ನಿದ್ರೆಯೋ ಅವನನ್ನು ಬಾಧಿಸುವುದಿಲ್ಲ. ಭೂಮಿ ಆಕಾಶಗಳಲ್ಲಿರುವುದೆಲ್ಲವೂ ಅವನದ್ದು. ಅವನ ಅನುಮತಿ ಇಲ್ಲದೆ ಅವನಲ್ಲಿ ಶಿಫಾರಸ್ಸು ಮಾಡಬಲ್ಲವರಾರು? ಅವರ ಮುಂದಿರುವುದನ್ನು ಮತ್ತು ಹಿಂದಿರುವುದನ್ನೆಲ್ಲ ಅವನು ಅರಿಯುತ್ತಾನೆ. ಅವನ ಜ್ಞಾನ ಭಂಡಾರದಲ್ಲಿರುವ ಯಾವುದೇ ಸಂಗತಿಯನ್ನೂ —ಅವನು ಉದ್ದೇಶಿಸಿದ್ದನ್ನು ಹೊರತು— ಅವರು ಅರಿಯುವುದಿಲ್ಲ. ಅವನ ಅರ್ಶ್ ಭೂಮಿ ಆಕಾಶಗಳನ್ನು ವ್ಯಾಪಿಸಿಕೊಂಡಿದೆ. ಅವೆರಡರ ರಕ್ಷಣೆ ಅವನಿಗೇನೂ ಕಷ್ಟವಲ್ಲ. ಅವನು ಸರ್ವೋಚ್ಚನೂ, ಮಹಾನನೂ ಆಗಿದ್ದಾನೆ." (ಕುರ್‌ಆನ್ 2:255)

ಅಲ್ಲಾಹು ಸೃಷ್ಟಿಕರ್ತನು

ಕುರ್‌ಆನ್ ಹೇಳುತ್ತದೆ, "ಅವನು ಭೂಮಿ ಆಕಾಶಗಳ ಮತ್ತು ಅವುಗಳ ನಡುವೆ ಇರುವ ಸರ್ವ ವಸ್ತುಗಳ ಪರಿಪಾಲಕ. ಆದ್ದರಿಂದ ಅವನಿಗೆ "ಇಬಾದತ್" (ಆರಾಧನೆ) ಮಾಡಿರಿ. ಅವನ ಆರಾಧನೆಯಲ್ಲೇ ಸ್ಥಿರವಾಗಿರಿ. ಅವನಂತೆ ಹೆಸರುಳ್ಳ ಬೇರೆ ಯಾರನ್ನಾದರೂ ನೀವು ತಿಳಿದಿದ್ದೀರಾ?" (ಕುರ್‌ಆನ್ 19:65)

"ಸರ್ವಸ್ತುತಿ ಅಖಿಲ ಲೋಕಗಳ ಪರಿಪಾಲಕನಾದ ಅಲ್ಲಾಹನಿಗೆ ಮೀಸಲು." (ಕುರ್‌ಆನ್ 1:2)

ಆರಾಧಿಸಲರ್ಹನು ಅಲ್ಲಾಹು ಮಾತ್ರ

"ನೀವು ಅಲ್ಲಾಹನ ಇಬಾದತ್ ಮಾಡಿರಿ ಮತ್ತು ತಾಗೂತರಿಂದ ದೂರವಾಗಿರಿ (ಎಂಬ ಸಂದೇಶದೊಂದಿಗೆ) ಎಲ್ಲ ಜನಾಂಗಗಳಿಗೂ ನಾವು ಸಂದೇಶವಾಹಕರನ್ನು ಕಳುಹಿಸಿದ್ದೇವೆ. ಅವರಲ್ಲೊಂದು ತಂಡಕ್ಕೆ ಅಲ್ಲಾಹು ಮಾರ್ಗದ-

ರ್ಶನ ಮಾಡಿದನು ಮತ್ತು ಪಥಭ್ರಷ್ಟತೆಗೆ ವಿಧೇಯರಾದ ಕೆಲವರೂ ಅವರಲ್ಲಿದ್ದಾರೆ. ಆದ್ದರಿಂದ ನೀವು ಭೂಮಿಯಲ್ಲಿ ಸಂಚರಿಸಿ (ಸತ್ಯವನ್ನು) ನಿಷೇಧಿಸಿದವರ ಪರಿಣಾಮ ಏನಾಯಿತೆಂದು ನೋಡಿ!" (ಕುರ್‌ಆನ್ 16:36)

"ಆದ್ದರಿಂದ ಅರಿತುಕೊಳ್ಳಿರಿ, ಅಲ್ಲಾಹನ ಹೊರತು ಅನ್ಯ ಆರಾಧ್ಯರಿಲ್ಲ ಎಂದು. ತಮ್ಮ ಪಾಪಗಳಿಗೆ ಕ್ಷಮೆ ಯಾಚಿಸಿರಿ. ಸತ್ಯವಿಶ್ವಾಸಿ ಮತ್ತು ಸತ್ಯ ವಿಶ್ವಾಸಿನಿಯರಿಗಾಗಿಯೂ (ಕ್ಷಮೆಯಾಚಿಸಿರಿ). ನಿಮ್ಮ ಚಲನವಲನದ ಸ್ಥಳವನ್ನೂ, ವಿಶ್ರಾಮ ಸ್ಥಳವನ್ನೂ ಅಲ್ಲಾಹು ಅರಿಯುತ್ತಾನೆ." (ಕುರ್‌ಆನ್ 47:19)

ಅಲ್ಲಾಹನಿಗೆ ಅತಿಸುಂದರ ಹೆಸರುಗಳಿವೆ

ಕುರ್‌ಆನ್ ಹೇಳುತ್ತದೆ: "ಅಲ್ಲಾಹನಿಗೆ ಅತಿಸುಂದರವಾದ ಹೆಸರುಗಳಿವೆ. ಆದ್ದರಿಂದ ಅವುಗಳ ಮೂಲಕ ಅವನನ್ನು ಕರೆದು ಪ್ರಾರ್ಥಿಸಿರಿ. ಅವನ ಹೆಸರುಗಳಲ್ಲಿ ವಕ್ರತೆ ಸೃಷ್ಟಿ-

ಸುವವರನ್ನು ಬಿಟ್ಟು ದೂರ ಸರಿಯಿರಿ. ಅವರು ಮಾಡುತ್ತಿರುವ ಕರ್ಮಗಳಿಗೆ ಸದ್ಯವೇ ಅವರಿಗೆ ಪ್ರತಿಫಲ ಸಿಗಲಿದೆ." (ಕುರ್‌ಆನ್ 7:180)

"ಅವನು ಅಲ್ಲಾಹು. ಅವನ ಹೊರತು ಅನ್ಯ ಆರಾಧ್ಯರಿಲ್ಲ . ಅವನು ಗೋಚರ ಮತ್ತು ಅಗೋಚರ ಸಂಗತಿಗಳನ್ನು ಅರಿಯುತ್ತಾನೆ. ಅವನು ಪರಮ ದಯಾಮಯನೂ ಕರುಣಾನಿಧಿಯೂ ಆಗಿದ್ದಾನೆ. ಅವನು ಅಲ್ಲಾಹು. ಅವನ ಹೊರತು ಅನ್ಯ ಆರಾಧ್ಯರಿಲ್ಲ. ಅವನು ಸಾರ್ವಭೌಮನು, ಪರಿಶುದ್ಧನು, ಸಂರಕ್ಷಣೆ ನೀಡುವವನು, ಶರಣುದಾತನು, ಸಂರಕ್ಷಕನು, ಅಜೇಯನು, ಸರ್ವಾಧಿಕಾರಿ ಮತ್ತು ಅತ್ಯಂತ ಮಹಾನನು. ಅವರು ಮಾಡುವ (ಅಲ್ಲಾಹನಿಗೆ ಭಾಗೀದಾರರನ್ನು ನಿಶ್ಚಯಿಸುವ) ಶಿರ್ಕ್‌ನಿಂದ ಅಲ್ಲಾಹು ಪರಿಶುದ್ಧನು. ಅವನು ಅಲ್ಲಾಹು. ಸೃಷ್ಟಿಕರ್ತನು, ಅಸ್ತಿತ್ವವನ್ನು ದಾನವೀಯುವವನು ಮತ್ತು ರೂಪ ಕೊಡುವವನು. ಅವನಿಗೆ ಅತಿಸುಂದರವಾದ ಹೆ-

ಸರುಗಳಿವೆ. ಭೂಮಿ ಆಕಾಶಗಳಲ್ಲಿರುವುದೆಲ್ಲವೂ ಅವನ ಕೀರ್ತನೆ ಮಾಡುತ್ತವೆ. ಅವನು ಅಜೇಯನೂ, ವಿವೇಕ-ಪೂರ್ಣನೂ ಆಗಿರುತ್ತಾನೆ." (ಕುರ್‌ಆನ್ 59:22–24)

ಅಲ್ಲಾಹು ಪ್ರಾರ್ಥನೆಗಳನ್ನು ಕೇಳುತ್ತಾನೆ

ಅಲ್ಲಾಹು ಹೇಳುತ್ತಾನೆ: "ನಿಮ್ಮ ಪ್ರಭು ಹೇಳುತ್ತಾನೆ: ನನ್ನನ್ನು ಕರೆದು ಪ್ರಾರ್ಥಿಸಿರಿ. ನಾನು ನಿಮಗೆ ಉತ್ತರ ಕೊಡುತ್ತೇನೆ. ನನ್ನ ಇಬಾದತ್ ಮಾಡಲು ದರ್ಪ ತೋ-ರಿಸುವವರಾರೋ, ಅವರು ಸದ್ಯವೇ ಅಪಮಾನಿತರಾಗಿ ನರಕವನ್ನು ಪ್ರವೇಶಿಸುವರು." (ಕುರ್‌ಆನ್ 40:60)

"(ಓ ಪ್ರವಾದಿಯವರೇ) ನನ್ನ ದಾಸರು ನನ್ನ ಬಗ್ಗೆ ನಿಮ್ಮ-ಲ್ಲಿ ಕೇಳಿದರೆ (ಹೇಳಿರಿ): ನಾನು ಅವರ ಸಮೀಪದಲ್ಲೇ ಇದ್ದೇನೆ. ಪ್ರಾರ್ಥಿಸುವವನು ನನ್ನನ್ನು ಕರೆದು ಪ್ರಾರ್ಥಿ-ಸಿದರೆ ನಾನು ಅವನ ಪ್ರಾರ್ಥನೆಗೆ ಉತ್ತರ ಕೊಡುತ್ತೇ-ನೆ. ಆದ್ದರಿಂದ ಅವರು ನನ್ನ ಕರೆಗೆ ಓಗೊಟ್ಟು ನನ್ನಲ್ಲಿ

ವಿಶ್ವಾಸವಿಡಲಿ. (ಹೀಗೆ ಮಾಡಿದರೆ) ಅವರು ಸನ್ಮಾರ್ಗ ಪಡೆಯಬಹುದು." (ಕುರ್‌ಆನ್ 2:186)

ಅಲ್ಲಾಹು ಪಾಪಗಳನ್ನು ಕ್ಷಮಿಸುತ್ತಾನೆ

ಕುರ್‌ಆನ್ ಹೇಳುತ್ತದೆ: "(ಓ ಪ್ರವಾದಿಯವರೇ) ನಿಶ್ಚಯ- ವಾಗಿಯೂ ನಾನು ಅತಿಹೆಚ್ಚು ಕ್ಷಮಿಸುವವನೂ, ಕರು- ಣಾನಿಧಿಯೂ ಆಗಿದ್ದೇನೆಂದು ನನ್ನ ದಾಸರಿಗೆ ತಿಳಿಸಿರಿ." (ಕುರ್‌ಆನ್ 22:49)

ಕರುಣಾನಿಧಿಯಾದ ಅಲ್ಲಾಹು

ಕುರ್‌ಆನ್ ಹೇಳುತ್ತದೆ: "ಅವನು ಪರಮ ದಯಾಮಯ- ನೂ, ಕರುಣಾನಿಧಿಯೂ ಆಗಿದ್ದಾನೆ." (ಕುರ್‌ಆನ್ 1:3)

ಅಲ್ಲಾಹು ಪ್ರತಿಫಲ ದಿನದ ಅಧಿಪತಿಯಾಗಿದ್ದಾನೆ

ಕುರ್‌ಆನ್ ಹೇಳುತ್ತದೆ: "ಅಲ್ಲಾಹು. ಅವನ ಹೊರತು ಅನ್ಯ ಆರಾಧ್ಯರಿಲ್ಲ. ಪುನರುತ್ಥಾನ ದಿನದಂದು ಅವನು

ನಿಮ್ಮೆಲ್ಲರನ್ನೂ ಖಂಡಿತವಾಗಿಯೂ ಒಟ್ಟುಗೂಡಿಸುತ್ತಾನೆ. ಅದರಲ್ಲಿ ಸಂಶಯವೇ ಇಲ್ಲ." (ಕುರ್‌ಆನ್ 4:87)

"ಅವರು ಹೊರಟು ಬರುವ ಆ ದಿನ! ಅವರ ಒಂದೇ ಒಂದು ವಿಷಯವೂ ಅಲ್ಲಾಹನಿಂದ ಮರೆಯಾಗಿಲ್ಲ. (ಅವರೊಡನೆ ಕೇಳಲಾಗುವುದು): ಇಂದು ಅಧಿಕಾರ ಯಾರದ್ದು? ಏಕಮಾತ್ರನೂ, ಸಮಗ್ರಾಧಿಪತಿಯೂ ಆದ ಅಲ್ಲಾಹನದ್ದು." (ಕುರ್‌ಆನ್ 40:16)

ಅಲ್ಲಾಹು ಸನ್ಮಾರ್ಗವನ್ನು ತೋರಿಸುತ್ತಾನೆ

ಕುರ್‌ಆನ್ ಹೇಳುತ್ತದೆ: "(ಓ ಪ್ರವಾದಿಯವರೇ) ನೀವಿಷ್ಟಪಡುವವರನ್ನು ಸನ್ಮಾರ್ಗದಲ್ಲಿ ಸೇರಿಸಲು ನಿಮಗೆ ಸಾಧ್ಯವಿಲ್ಲ. ಆದರೆ ಅಲ್ಲಾಹು ಅವನಿಚ್ಛಿಸಿದವವರನ್ನು ಸನ್ಮಾರ್ಗಕ್ಕೆ ಸೇರಿಸುತ್ತಾನೆ. ಸನ್ಮಾರ್ಗ ಪಡೆದವರ ಬಗ್ಗೆ ಅವನು ಚೆನ್ನಾಗಿ ತಿಳಿದಿದ್ದಾನೆ." (ಕುರ್‌ಆನ್ 28:56)

ತವಕ್ಕುಲ್ ಮಾಡಲು ಅರ್ಹನಾದವನು ಅಲ್ಲಾಹು ಮಾತ್ರ

ಅಲ್ಲಾಹು ಹೇಳುತ್ತಾನೆ: "(ಓ ಪ್ರವಾದಿಯವರೇ) ಅವರೇನಾದರೂ ವಿಮುಖರಾಗುವುದಾದರೆ, ಹೇಳಿರಿ: ನನಗೆ ಅಲ್ಲಾಹು ಸಾಕು. ಅವನ ಹೊರತು ಅನ್ಯ ಆರಾಧ್ಯರಿಲ್ಲ. ನಾನು ಅವನಲ್ಲಿಯೇ ಭರವಸೆ ಇಟ್ಟಿದ್ದೇನೆ. ಅವನು ಮಹಾ ಸಿಂಹಾಸನದ ಒಡೆಯನಾಗಿದ್ದಾನೆ." (ಕುರ್‌ಆನ್ 9:129)

"ಶತ್ರುಗಳು ನಿಮ್ಮ ವಿರುದ್ಧ ಸಂಘಟಿತರಾಗುತ್ತಿದ್ದಾರೆ. ಆದ್ದರಿಂದ ಅವರನ್ನು ಭಯಪಡಿರಿ ಎಂದು ಜನರು ಹೇಳಿದಾಗ, ಅದು ಅವರ (ಸತ್ಯವಿಶ್ವಾಸಿಗಳ) ವಿಶ್ವಾಸವನ್ನು ಇನ್ನಷ್ಟು ಹೆಚ್ಚಿಸಿತು. ಅವರು ಹೇಳಿದರು: ನಮಗೆ ಅಲ್ಲಾಹು ಸಾಕು. ಭರವಸೆ ಇಡಲು ಅವನು ಎಷ್ಟಕ್ಕೂ ಉತ್ತಮನೇ ಆಗಿದ್ದಾನೆ." (ಕುರ್‌ಆನ್ 3:175)

ಅಲ್ಲಾಹು ಶಿರ್ಕ್ ಮಾಡುವವರನ್ನು ಕ್ಷಮಿಸು-ವುದಿಲ್ಲ

ಅಲ್ಲಾಹು ಹೇಳುತ್ತಾನೆ: "ನಿಶ್ಚಯವಾಗಿಯೂ ತನ್ನೊಂದಿಗೆ ಶಿರ್ಕ್ ಮಾಡುವುದನ್ನು ಅಲ್ಲಾಹು ಕ್ಷಮಿಸುವುದಿಲ್ಲ. ಅದರ ಹೊರತಾದುದನ್ನು ಅವನುದ್ದೇಶಿಸುವವರಿಗೆ ಅವನು ಕ್ಷಮಿಸುತ್ತಾನೆ. ಅಲ್ಲಾಹನೊಂದಿಗೆ ಸಹಭಾಗಿಗಳನ್ನು ನಿಶ್ಚಯಿಸುವವನು ಯಾರೋ, ಅವನು ಘೋರವಾದ ಪಾಪವನ್ನು ಆರೋಪಿಸಿದ್ದಾನೆ." (ಕುರ್ಆನ್ 4:48)

ಪ್ರವಾದಿ(ﷺ) ರನ್ನು ಅನುಸರಿಸುವುದು

ಪ್ರವಾದಿ(ﷺ) ಅನಾಥರಾಗಿ ಬೆಳೆದರು

ಅಲ್ಲಾಹು ಹೇಳುತ್ತಾನೆ: "ಅವನು ನಿನ್ನನ್ನು ಅನಾಥನಾಗಿ ಕಂಡು ತರುವಾಯ ನಿನಗೆ ಆಸರೆಯನ್ನು ಕೊಡಲಿಲ್ಲ-

ವೇ?" (ಕುರ್‌ಆನ್ 93:6)

ಪ್ರವಾದಿ ಮುಹಮ್ಮದ್(ﷺ) ಗರ್ಭಾವಸ್ಥೆಯಲ್ಲಿರುವಾಗಲೇ ತಮ್ಮ ತಂದೆಯನ್ನು ಕಳಕೊಂಡರು. ಆರು ವರ್ಷವಾದಾಗ ತಾಯಿಯನ್ನೂ ಕಳಕೊಂಡರು. ಅನಾಥರಾಗಿ ತಾತ ಅಬ್ದುಲ್ ಮುತ್ತಲಿಬ್‌ರ ಆಶ್ರಯದಲ್ಲಿ ಬೆಳೆದರು. ಅವರ ಮರಣಾನಂತರ ಚಿಕ್ಕಪ್ಪ ಅಬೂತಾಲಿಬರ ಆಶ್ರಯದಲ್ಲಿ ಬೆಳೆದು ದೊಡ್ಡವರಾದರು.

ಪ್ರವಾದಿ(ﷺ) ಅನಕ್ಷರಸ್ಥರು

"(ಒ ಪ್ರವಾದಿಯವರೇ) ಹೇಳಿರಿ! ಓ ಮಾನವರೇ! ನಿಶ್ಚಯವಾಗಿಯೂ ನಾನು ನಿಮ್ಮೆಲ್ಲರ ಕಡೆಗೆ ಭೂಮಿ ಆಕಾಶಗಳ ಒಡೆಯನಾದ ಅಲ್ಲಾಹನಿಂದ ಕಳುಹಿಸಲ್ಪಟ್ಟ ಸಂದೇಶವಾಹಕನಾಗಿದ್ದೇನೆ. ಅವನ ಹೊರತು ಅನ್ಯ ಆರಾಧ್ಯರಿಲ್ಲ. ಜೀವ ನೀಡುವವನು ಮತ್ತು ಮರಣ ನೀಡುವವನು ಅವನೇ ಆಗಿದ್ದಾನೆ. ಆದ್ದರಿಂದ ಅಲ್ಲಾಹನಲ್ಲಿ

ಮತ್ತು ಅವನ ಸಂದೇಶವಾಹಕರಲ್ಲಿ, ಹಾಗೂ ಅಲ್ಲಾಹನಲ್ಲಿಯೂ, ಅವನ ವಚನಗಳಲ್ಲಿಯೂ ವಿಶ್ವಾಸವಿಡುವ ಅನಕ್ಷರಸ್ಥರಾದ ಪ್ರವಾದಿ (ಮುಹಮ್ಮದ್)ಯಲ್ಲಿಯೂ ವಿಶ್ವಾಸವಿಡಿರಿ. ಅವರನ್ನೇ ಅನುಸರಿಸಿರಿ. ನೀವು ಸನ್ಮಾರ್ಗ ಪಡೆಯಬಹುದು." (ಕುರ್‌ಆನ್ 7:158)

ಪ್ರವಾದಿ(ﷺ) ಕುರಿತು ಪೂರ್ವ ವೇದಗ್ರಂಥಗಳಲ್ಲಿ ಉಲ್ಲೇಖಿಸಲ್ಪಟ್ಟಿದೆ

"ಅವರಾದರೋ ತಮ್ಮಲ್ಲಿರುವ ತೌರಾತ್, ಇಂಜೀಲ್‌ಗಳಲ್ಲಿ ಉಲ್ಲೇಖಿತರಾಗಿ ಕಾಣುವ ನಿರಕ್ಷರಸ್ಥ ಪ್ರವಾದಿಯಾದ ಈ ಸಂದೇಶವಾಹಕರನ್ನು ಅನುಸರಿಸುವವರಾಗಿದ್ದಾರೆ. (ಆ ಪ್ರವಾದಿ) ಅವರಿಗೆ ಒಳಿತನ್ನು ಆಜ್ಞಾಪಿಸುತ್ತಾರೆ ಮತ್ತು ಕೆಡುಕನ್ನು ವಿರೋಧಿಸುತ್ತಾರೆ. ಶುದ್ಧವಾದ ವಸ್ತುಗಳನ್ನು ಧರ್ಮಸಮ್ಮತಗೊಳಿಸಿ ಅಶುದ್ಧವಾದುದನ್ನು ನಿಷಿದ್ಧಗೊಳಿಸುತ್ತಾರೆ. ಅವರ ಭಾರವನ್ನೂ, ಅವರ ಮೇಲಿರುವ

ಸಂಕೋಲೆಗಳನ್ನೂ ಅವರಿಂದ ಕೆಳಗಿಳಿಸುತ್ತಾರೆ. ಹೀಗೆ ಯಾರು ಅವರಲ್ಲಿ (ಈ ಪ್ರವಾದಿಯಲ್ಲಿ) ವಿಶ್ವಾಸವಿಟ್ಟು, ಅವರಿಗೆ ಬೆಂಬಲ ಕೊಟ್ಟು ಸಹಾಯ ಮಾಡುತ್ತಾರೋ ಹಾಗೂ ಅವರ ಜೊತೆ ಅವತೀರ್ಣವಾದ ದಿವ್ಯಜ್ಯೋತಿ-ಯನ್ನು (ಕುರ್‌ಆನನ್ನು) ಅನುಗಮಿಸುತ್ತಾರೋ, ಅವರೇ ಯಶಸ್ವಿಯಾದವರು." (ಕುರ್‌ಆನ್ 7:157)

ಪ್ರವಾದಿ(ﷺ) ಒಬ್ಬ ಮನುಷ್ಯರು. ಆದರೆ ವಹೀ ಲಭಿಸುವುದರಿಂದ ಶ್ರೇಷ್ಠರು

"(ಓ ಪ್ರವಾದಿಯವರೇ) ಹೇಳಿರಿ: ನಾನು ನಿಮ್ಮಂತಿರುವ ಒಬ್ಬ ಮನುಷ್ಯ ಮಾತ್ರವಾಗಿದ್ದೇನೆ. ನಿಮ್ಮ ದೇವರು ಏಕಮಾತ್ರ ದೇವನೆಂದು ನನಗೆ ದಿವ್ಯವಾಣಿ ಸಿಗುತ್ತಿದೆ. ಆದ್ದರಿಂದ ಯಾರು ತನ್ನ ಪ್ರಭುವಿನ ಭೇಟಿಯನ್ನು ನಿ-ರೀಕ್ಷಿಸುತ್ತಾನೋ ಅವನು ಸತ್ಕರ್ಮವನ್ನು ಕೈಗೊಳ್ಳಲಿ ಮತ್ತು ತನ್ನ ಪ್ರಭುವಿನ ಇಬಾದತ್‌ನಲ್ಲಿ (ಆರಾಧನೆಯ-

ಲ್ಲಿ) ಇತರ ಯಾರನ್ನೂ ಭಾಗೀದಾರನಾಗಿ ಮಾಡದಿರಲಿ." (ಕುರ್‌ಆನ್ 18:110)

ಪ್ರವಾದಿ(ﷺ) ಮುನ್ನೆಚ್ಚರಿಕೆ ಮತ್ತು ಸುವಾರ್ತೆ ನೀಡುವವರು

"(ಓ ಪ್ರವಾದಿಯವರೇ), ನಿಮ್ಮನ್ನು ನಾವು ಸಕಲ ಮನುಷ್ಯರಿಗೂ ಸುವಾರ್ತೆ ಕೊಡುವವರಾಗಿ ಹಾಗೂ ಮುನ್ನೆಚ್ಚರಿಕೆ ನೀಡುವವರಾಗಿ ಕಳುಹಿಸಿದ್ದೇವೆ. ಆದರೆ ಹೆಚ್ಚಿನ ಜನರು (ಇದನ್ನು) ಅರಿಯುವುದಿಲ್ಲ." (ಕುರ್‌ಆನ್ 34:28)

ಪ್ರವಾದಿ(ﷺ) ರನ್ನು ಲೋಕಕ್ಕೆ ಅನುಗ್ರಹವಾಗಿ ಕಳುಹಿಸಲಾಗಿದೆ

"(ಓ ಪ್ರವಾದಿಯವರೇ) ಸರ್ವಲೋಕದ ಜನರಿಗೆ ಒಂದು ಕರುಣೆಯಾಗಿಯಲ್ಲದೆ ನಾವು ನಿಮ್ಮನ್ನು ಕಳುಹಿಸಿಲ್ಲ."

(ಕುರ್‌ಆನ್ 21:107)

ಪ್ರವಾದಿ(ﷺ) ರನ್ನು ಅನುಸರಿಸುವುದು ಕಡ್ಡಾಯ

“(ಓ ಪ್ರವಾದಿಯವರೇ) ಹೇಳಿರಿ: ನೀವು ಅಲ್ಲಾಹನನ್ನು ಪ್ರೀತಿಸುವುದಾದರೆ ನನ್ನನ್ನು ಅನುಸರಿಸಿರಿ. ಹಾಗಾದರೆ ಅಲ್ಲಾಹು ನಿಮ್ಮನ್ನು ಪ್ರೀತಿಸುತ್ತಾನೆ ಮತ್ತು ನಿಮ್ಮ ಪಾಪ-ಗಳನ್ನು ಕ್ಷಮಿಸುತ್ತಾನೆ. ಅಲ್ಲಾಹು ಅತಿಹೆಚ್ಚು ಕ್ಷಮಿಸುವವ-ನೂ ಕರುಣಾನಿಧಿಯೂ ಆಗಿದ್ದಾನೆ.” (ಕುರ್‌ಆನ್ 3:31)

“ಸಂದೇಶವಾಹಕರು ನಿಮಗೆ ಏನು ಕೊಡುತ್ತಾರೋ ಅದನ್ನು ಸ್ವೀಕರಿಸಿ ಮತ್ತು ಯಾವುದರಿಂದ ನಿಮ್ಮನ್ನು ತಡೆಯುತ್ತಾರೋ ಅದರಿಂದ ದೂರ ನಿಲ್ಲಿರಿ. ಅಲ್ಲಾಹ-ನನ್ನು ಭಯಪಡಿರಿ. ನಿಸ್ಸಂದೇಹವಾಗಿಯೂ ಅಲ್ಲಾಹು ಅತಿಕಠಿಣವಾಗಿ ಶಿಕ್ಷಿಸುತ್ತಾನೆ.” (ಕುರ್‌ಆನ್ 59:7)

ಪ್ರವಾದಿ(ﷺ) ರನ್ನು ಪ್ರೀತಿಸುವುದು ಕಡ್ಡಾಯ

ಪ್ರವಾದಿ(ﷺ) ಹೇಳಿದರು: "ನೀವು ನಿಮ್ಮ ಮಕ್ಕಳು, ಮಾತಾಪಿತರು ಮತ್ತು ಇತರೆಲ್ಲಾ ಜನರಿಗಿಂತ ಹೆಚ್ಚು ನನ್ನನ್ನು ಪ್ರೀತಿಸುವ ತನಕ ನಿಮ್ಮಲ್ಲಿ ಯಾರೂ ನೈಜ ಸತ್ಯವಿಶ್ವಾಸಿಗಳಾಗುವುದಿಲ್ಲ." (ಬುಖಾರಿ ಮತ್ತು ಮುಸ್ಲಿಮ್)

ಪ್ರವಾದಿ(ﷺ) ರವರು ಅಂತಿಮ ಪ್ರವಾದಿ

ಕುರ್‌ಆನ್ ಹೇಳುತ್ತದೆ: "(ಓ ಜನರೇ) ಮುಹಮ್ಮದರು ನಿಮ್ಮ ಪುರುಷರಲ್ಲಿ ಯಾರ ತಂದೆಯೂ ಅಲ್ಲ. ಆದರೆ ಅವರು ಅಲ್ಲಾಹನ ಸಂದೇಶವಾಹಕರು ಮತ್ತು ಪ್ರವಾದಿಗಳಲ್ಲಿ ಕೊನೆಯವರಾಗಿದ್ದಾರೆ. ಅಲ್ಲಾಹು ಸರ್ವ ವಸ್ತುಗಳ ಬಗ್ಗೆ ಜ್ಞಾನವುಳ್ಳವನಾಗಿದ್ದಾನೆ." (ಕುರ್‌ಆನ್ 33:40)

ಪ್ರವಾದಿ(ﷺ) ರವರ ಮೂಲಕ ಇಸ್ಲಾಮ್ ಧರ್ಮ ಪೂರ್ಣವಾಗಿದೆ

ಕುರ್‌ಆನ್ ಹೇಳುತ್ತದೆ: "ಇಂದು ನಾನು ನಿಮಗೆ ನಿಮ್ಮ ಧರ್ಮವನ್ನು ಪೂರ್ಣಗೊಳಿಸಿ ಕೊಟ್ಟಿದ್ದೇನೆ ಮತ್ತು ನನ್ನ ಅನುಗ್ರಹವನ್ನು ನಿಮಗೆ ಪೂರ್ತೀಕರಿಸಿದ್ದೇನೆ ಹಾಗೂ ಇಸ್ಲಾಮನ್ನು ನಿಮಗೆ ದೀನ್ (ಧರ್ಮ) ಆಗಿ ತೃಪ್ತಿಪಟ್ಟಿದ್ದೇನೆ." (ಕುರ್‌ಆನ್ 5:3)

ಪ್ರವಾದಿ(ﷺ) ಹೇಳಿದರು: "ನಾನು ನಿಮ್ಮಲ್ಲಿ ಎರಡು ವಸ್ತುಗಳನ್ನು ಬಿಟ್ಟು ಹೋಗುತ್ತೇನೆ. ಅದನ್ನು ಗಟ್ಟಿಯಾಗಿ ಹಿಡಿಯುವ ತನಕ ನೀವು ಪಥಭ್ರಷ್ಟರಾಗಲಾರಿರಿ. ಅವು ಅಲ್ಲಾಹನ ಗ್ರಂಥ (ಕುರ್‌ಆನ್) ಮತ್ತು ಪ್ರವಾದಿಚರ್ಯೆ (ಸುನ್ನತ್) ಯಾಗಿದೆ." (ಬುಖಾರಿ ಮತ್ತು ಮುಸ್ಲಿಮ್)

ಪ್ರವಾದಿ(ﷺ) ಹೇಳಿದರು: "ನಮ್ಮ ಈ ಧರ್ಮದ ವಿಷಯದಲ್ಲಿ ಯಾರಾದರೂ ಹೊಸ ಆಚಾರವನ್ನು ಸೇರಿಸಿದರೆ

ಅದನ್ನು ತಿರಸ್ಕೃತವಾಗಿದೆ." (ಬುಖಾರಿ ಮತ್ತು ಮುಸ್ಲಿಮ್)

الحركة النصيحة الإسلامية

ANNASEEHA ISLAMIC MOVEMENT

SURATKAL, MANGALORE - 575 014
MOB: 9731593091 / 9945171612

Jamiyathe Ahle Hadees
Mangalore